MYSORE LEGISLATIVE ASSEMBLY

FIFTEENTH DAY.

Wednesday, 3rd February 1965.

The House met in the Assembly Chamber, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given.)

Loss incurred due to Heavy Rains in Dharwar and Bijapur Districts

*Q.—162. SRI A. J. DODDAMETI (Ron).—

Will the Government pleased to state :—

(*a*) whether it has come to their notice that houses have collapsed and livestock lost in many towns and villages in Dharwar and Bijapur districts during last week of September and First week of October due to heavy rainfall ;

(*b*) if so, the nature of loss incurred in the villages of the above two districts together with the estimated amount of loss ;

(*c*) whether the persons who have lost their houses or livestock have requested for grant of relief ;

(*d*) if so, the number of villages for which applications have been received and the action taken in this behalf ?

*A.—SRI M. V. KRISHNAPPA (Minister for Revenue).—

(*a*) Yes.

(*b*) Nature of loss :

(i) Damage of houses.
(ii) Loss of human lives.
(iii) Loss of livestock.
(iv) Damage to agricultural lands.

(SRI M. V. KRISHNAPPA)

Estimated amount of loss :

Bijapur District : About Rs. 40 Lakhs.
Dharwar District : About Rs. 4½ Lakns.

(*c*) Yes.

(*d*) There was demand for grant of relief from almost all the villages of Bijapur District and 98 villages of Dharwar District.

Gratuitous relief and loans under the Non-Agricultural Loans Act have been sanctioned to the affected persons in Dharwar District. Gratuitous relief, interest free loans, loans under the Agricultural Loans Act and L.I L. Act and Non-Agricultural Loans Act and G C.I. sheets have been sanctioned to the affected person in Bijapur District.

ಶ್ರೀ ಎ. ಜೆ. ದೊಡ್ಡಮೇಟಿ.—(ಡಿ) ಭಾಗಕ್ಕೆ ಕೊಟ್ಟಿರುವ ಉತ್ತರದಲ್ಲಿ ಬಿಜಾಪುರ ಜಿಲ್ಲೆಯ ಎಲ್ಲ ಗ್ರಾಮಗಳವರೂ ಮತ್ತು ಧಾರವಾಡ ಜಿಲ್ಲೆಯ 98 ಗ್ರಾಮಗಳವರೂ ಪರಿಹಾರವನ್ನು ಕೇಳಿದ್ದಾರೆಂದು ಹೇಳಿದ್ದಾರೆ. ಇವರಲ್ಲಿ ಯಾರು ಯಾರಿಗೆ ಎಷ್ಟು ಗ್ರಾಂಟ್ ಕೊಟ್ಟಿದ್ದಾರೆ ಮತ್ತು ಯಾವ ಯಾವ ನವಲತ್ತುಗಳನ್ನು ಮಾಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಹಳ ದೊಡ್ಡ ಲೆಕ್ಕ ಕೊಟ್ಟಿದ್ದಾರೆ. ಬಿಜಾಪುರದಲ್ಲಿ ಹೆಚ್ಚಿಗೆ ನಷ್ಟವಾಗಿದೆ ಎಂದು ತಾಲ್ಲೂಕುವಾರು ಅಂಕಿಗಣ್ಣನ್ನು ಕೊಟ್ಟಿದ್ದಾರೆ. ಎ. ಎಲ್. ಮತ್ತು ಎಲ್.ಐ.ಎಲ್. ಆಕ್ಟ್. ಪ್ರಕಾರ ಅಗ್ರಿಕಲ್ಚರಲ್ ಲೋನ್ಸ್ ಬಿಜಾಪುರ ತಾಲ್ಲೂಕಿಗೆ 48,700 ರೂಪಾಯಿ, ಬಾಗೇವಾಡಿ ತಾಲ್ಲೂಕಿಗೆ 68,000 ರೂಪಾಯಿ. ಮುದ್ದೆ ಬಿಹಾಳಕ್ಕೆ 69,000 ರೂಪಾಯಿ ಬಾಗಲಕೋಟೆಗೆ 67, 00 ರೂಪಾಯಿ ಹೀಗೆ ಕೊಟ್ಟಿದ್ದಾರೆ. ಇದಲ್ಲದೆ ಬಡ್ಡಿ ರಹಿತ ಸಾಲವಾಗಿ ಸ್ವಲ್ಪ ಹಣವನ್ನೂ ಕೊಟ್ಟಿದ್ದಾರೆ. ಜಿಂಕ್ ಷೀಟುಗಳನ್ನು ಸಹ ಕೊಟ್ಟಿದೆ.

ಶ್ರೀ ಸಿದ್ದಯ್ಯ ಕಾಶಿಮಠ.—ಪರಿಹಾರ ಕಾಮಗಾರಿಗಳಿಗಾಗಿ ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳಿಗೆ ಎಷ್ಟು ಹಣವನ್ನು ಒದಗಿಸಿವ್ವೀರಿ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ನನ್ನ ಹತ್ತಿರ ಈಗ ಇಲ್ಲ. ಒಟ್ಟಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಕಡಮೆ ನಷ್ಟವಾಯಿತು ಮತ್ತು ಬಿಜಾಪುರ ಜಿಲ್ಲೆಯಲ್ಲಿ ಜಾಸ್ತಿ ನಷ್ಟವಾಯಿತು.

ಶ್ರೀ ಎ. ಜೆ. ದೊಡ್ಡಮೇಟಿ.—ಧಾರವಾಡ ಜಿಲ್ಲೆಯಲ್ಲಿ 4½ ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ಹೇಳಿದ್ವೀರಿ. ಪ್ರತಿ ತಾಲ್ಲೂಕಿನ ಅಂಕಿಗಳು ಇವೆಯೇ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಧಾರವಾಡದ್ದು ಇಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಜನರು ಮರಣವಾಗಿದ್ದಾರೆಂದು ಹೇಳಿದ್ವೀರಿ, ಅದು ಎಷ್ಟು ಎಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—41 ಮಂದಿ ನತ್ತಿದ್ದಾರೆಂದು ಲೆಕ್ಕ ಬಂದಿದೆ. 70 ಜಾನುವಾರುಗಳು ಮರಣ ಹೊಂದಿವೆ ಎಂದೂ ಲೆಕ್ಕ ಬಂದಿದೆ.

ಶ್ರೀ ಟಿ. ಕೆ. ಕಂಬಳಿ.—ಪ್ರವಾಹದಲ್ಲಿ ಮಡಿದವರಿಗೆ ಏನಾದರೂ ಪರಿಹಾರವನ್ನು ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ರೂಲ್ಸ್ ಪ್ರಕಾರ ಸ್ಥಳದ ಡೆಪ್ಯುಟಿ ಕಮಿಷನರು ಒಂದು ಸಾವಿರ ರೂಪಾಯಿಗಳವರೆಗೂ ಪರಿಹಾರ ಕೊಡಬಹುದು ಎಂದು ಇದೆ. ಕೆಲವು ಸಂದರ್ಭಗಳಲ್ಲಿ ಕೊಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಅದೆಲ್ಲ ರಿಕಾರ್ಡ್ ಆಗಬೇಕಾಗುತ್ತದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಜನ ಮತ್ತು ಜಾನುವಾರುಗಳು ನತ್ತಿವೆ ಎಂದು ಹೇಳಿರುವುದಕ್ಕೆ ಎವರಗಳನ್ನು ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ರೋಣ ತಾಲ್ಲೂಕಿನ ಕಳಿಂಗನೂರು ಗ್ರಾಮದಲ್ಲಿ ಎ.ಜೆ. ಕಳೇಗುರವ ಎನ್ನುವವರ ಮನೆ ಬಿದ್ದು ಅವರ ತಮ್ಮ ತೀರಿ ಹೋದರು ಎಂದು ಬಂದಿದೆ. ಇತರ ವಿವರಗಳು ಈಗ ಇಲ್ಲಿಲ್ಲ.

ಶ್ರೀ ಸಿದ್ದಯ್ಯ ಕಾಶಿಮಠ್.– ಜನುವಾರುಗಳು ಸತ್ತಿವೆ. ಅವುಗಳ ಮಾಲೀಕರಿಗೆ ಸಬ್ಸಿಡಿ ಲೋನ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೆಲ್ಲ ರೂಲ್ಸ್ ಇವೆ. ಪ್ರವಾಹದಿಂದ, ನ್ಯಾಚುರಲ್ ಕಲಾಮಿಟೀಸಿಂದ ನಷ್ಟವಾದರೆ ಏನೇನು ಕೊಡಬೇಕು ಎಂದು ಪೂರ್ವದಿಂದಲೂ ಕೆಲವು ರೂಲ್ಸ್ ಇವೆ, ಆ ಪ್ರಕಾರವಾಗಿ ಕೊಡುತ್ತಾರೆ. ಈ ಪರಿಸ್ಥಿತಿಯಲ್ಲಿ ಇಷ್ಟು ನಷ್ಟವಾದರೂ ಕೂಡ ತಕ್ಷಣ ಪರಿಸ್ಥಿತಿ ಬಹಳ ಉತ್ತಮಗೊಂಡ ಹಾಗೆ ಕಾಣುತ್ತದೆ. ಜನ ಅಷ್ಟಾಗಿ ಒತ್ತಾಯ ಮಾಡಿದ ಹಾಗೆ ಕಾಣಲಿಲ್ಲ.

ಶ್ರೀ ಟಿ. ಕೆ. ಕಂಬಳಿ.—ಜಾನುವಾರುಗಳು ಸತ್ತಿರುವ ಬಗ್ಗೆ ಹೇಳಿದಿರಿ. ಕೆಲವು ಕಡೆ ಕುರಿ, ಮೇಕೆ ಇವುಗಳ ನಷ್ಟವಾಗಿದೆ. ಅವರಿಗೆ ಏನಾದರೂ ಸಹಾಯ ಮಾಡಲು ಯೋಚನೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.– ಅದಕ್ಕೆಲ್ಲ ರೂಲ್ಸ್ ಇದೆ, ಆ ಪ್ರಕಾರ ಕೊಡುತ್ತಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ಜನಗಳಿಂದ ಒತ್ತಾಯ ಬರಲಿಲ್ಲ ಎಂದು ಅಲ್ಲ ಒಳ್ಳೆಯ ಪರಿಸ್ಥಿತಿ ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ಅದು ಆ ಜನರ ಒಳ್ಳೆಯತನವನ್ನು ತೋರಿಸುತ್ತದೆ. ಮಾನ್ಯ ಮಂತ್ರಿಗಳಲ್ಲಿ ಕೆಲವು ವಿವರಗಳಿಲ್ಲದೇ ಇರುವುದರಿಂದ ಈ ಪ್ರಶ್ನೆಯನ್ನು ಮುಂದೆ ಯಾವಾಗಲಾದರೂ ತೆಗೆದುಕೊಳ್ಳಬೇಕು ಎಂದು ನಾನು ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

Quotas of Foodgrains to several Hotels and Restaurants.

*Q.—207. Sri SIDDAIAH KASHIMATH (Shirahatti).—

Will the Government be pleased to state :

whether the foodgrains, *i.e.*, rice-sugar and wheat products quotas are given to the several hotels and restaurants and lodging houses in the State ?

A.—Sri M. V. KRISHNAPPA (Minister for Revenue).—

1. Sugar is being given to the catering establishments depending upon the local conditions and requirements.

2. Rice and wheat are being given according to the local conditions and availability of the stocks.

ಶ್ರೀ ಸಿದ್ದಯ್ಯ ಕಾಶಿಮಠ.—ಫಲಹಾರ ಮಂದಿರಗಳಿಗೆ ಮತ್ತು ಭೋಜನಾಲಯಗಳಿಗೆ ಅಕ್ಕಿ, ಗೋಧಿ, ಸಕ್ಕರೆ ಇವುಗಳನ್ನು ಕೋಟಾ ಪ್ರಕಾರ ಕೊಡುತ್ತೀರಿ. ಆದರೆ ಅವರು ಮಾರತಕ್ಕ ಇಡ್ಲಿ, ಕಾಫಿ ಮುಂತಾದವುಗಳ ಮೇರೆ ಬೆರೆ ನಿಗದಿ ಮಾಡಲು ಏನಾದರೂ ಹತೋಟಿ ಸರ್ಕಾರಕ್ಕೆ ಇದೆಯೇ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಂಗಳೂರಿನಲ್ಲಿ ಮಾತ್ರ ಹೋಟೆಲ್ ಮಾಲೀಕರ ಅಸೋಸಿಯೇಷನ್ ಇದ್ದು ಎಲ್ಲ ಚೆನ್ನಾಗಿ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಅವರದೇ ಒಂದು ಸಹಕಾರ ಸಂಘ ಇದೆ. ಪ್ರತಿಯೊಬ್ಬರೂ ಕೊಡುವ ಮಾರಾಟ ತೆರಿಗೆಯ ಆಧಾರದ ಮೇರೆ ಅವರಿಗೆ ಕೋಟಾ ಕೊಡಲಾಗುತ್ತದೆ. ಅದಕ್ಕಾಗಿ ರೇಷನ್ ಕಾರ್ಡುಗಳನ್ನು ಕೊಟ್ಟಿದ್ದಾರೆ. ಮಾರಾಟ ತೆರಿಗೆಯ ಆಧಾರದ ಮೇರೆ ಸಕ್ಕರೆಯನ್ನು ಕೊಡುತ್ತಾರೆ. ಮಿಕ್ಕ ವನ್ತುಗಳು ಸರ್ಕಾರದವರ ಹತ್ತಿರ ಇದ್ದಾಗ ಡೆಪ್ಯುಟಿ ಕಮಿಷನರಿಗೆ ಅಲಾಟ್ ಮಾಡಲಾಗುತ್ತದೆ. ಅವರು ಸ್ಥಳದ ಪರಿಸ್ಥಿತಿ ಮತ್ತು ಅಗತ್ಯಗಳನ್ನು ನೋಡಿಕೊಂಡು ಅವರ ಹತ್ತಿರ ಬಂದಿರುವ ದಾಸ್ತಾನನ್ನು ನೋಡಿಕೊಂಡು ಹಂಚುತ್ತಾರೆ. ಬೆಂಗಳೂರಿನಲ್ಲಿ ಮಾತ್ರ ರೆಗ್ಯುಲರ್ ಕೋಟಾ ಕೊಡುತ್ತಾರೆ.

ಶ್ರೀ ಸಿದ್ದಯ್ಯ ಕಾಶಿಮಠ್.—ಅಕ್ಕಿ, ಗೋಧಿ ಇವುಗಳನ್ನು ಅವರಿಗೆ ಸರ್ಕಾರ ಕೊಡುವಾಗ ಅವರು ಮಾರತಕ್ಕ ದಿನಸಿಗಳ ಮೇಲೆ ಹೆಚ್ಚು ಬೆಲೆ ಹಾಕದಂತೆ ಮಾಡಲು ಸರ್ಕಾರಕ್ಕೆ ಏನಾದರೂ ಹತೋಟಿ ಇದೆಯೇ ಸ್ವಾಮಿ ?